# ಸುದ್ದಿಸಂಚಯ

## ರಾಮಕೃಷ್ಣ ಮಿಷನ್ನಿನಿಂದ ಗುಜರಾತ್‌ನಲ್ಲಿ ಭೂಕಂಪಸಂತ್ರಸ್ತರಿಗೆ ಪರಿಹಾರ ಕಾರ್ಯ

**ಪ್ರಕೃತಿ** ವಿಕೋಪದಿಂದ ಗುಜರಾತ್‌ನಲ್ಲಿ ಜನವರಿ ೨೬ರಂದು ಸಂಭವಿಸಿರುವ ಅತ್ಯಂತ ಭೀಕರವಾದ ಭೂಕಂಪದಿಂದ ಸಂತ್ರಸ್ತರಾದವರಿಗೆ ರಾಮಕೃಷ್ಣ ಮಿಷನ್ನಿನ ಪರಿಹಾರ ಕಾರ್ಯ ತಂಡ ತನ್ನ ಶಾಖೆಗಳಿಂದ ವ್ಯಾಪಕವಾದ ಪ್ರಾಥಮಿಕ ಪರಿಹಾರವನ್ನು ಒದಗಿಸಿತು. ೧.೦೨.೨೦೦೧ರವರೆಗಿನ ಈ ಪರಿಹಾರಕಾರ್ಯದ ವರದಿ ಹೀಗಿದೆ:

(ಅ) ರಾಜ್‌ಕೋಟ್‌ನಲ್ಲಿನ ಶಾಖೆಯಿಂದ ತಂಕಾರ, ಮೊರ್ವಿ, ಬಚಾವೊ, ಧನೇತಿ, ಭೂಜ್ ಮತ್ತು ಹತ್ತಿರದ ಪ್ರದೇಶಗಳಲ್ಲಿ ಭೂಕಂಪದಿಂದ ತೀವ್ರವಾಗಿ ಪೀಡಿತರಾದ ಸಾವಿರಾರು ಸಂತ್ರಸ್ತರಿಗೆ ೧,೦೯,೮೮೫ ಊಟದ ಪ್ಯಾಕೆಟ್ಟುಗಳು, ೧,೦೦,೦೮೦ ಬಿಸ್ಕತ್ತುಗಳು, ೧೧,೦೦೦ ಕೆ.ಜಿ. ಗಟಿಯಾ, ೫೫,೩೫೦ ನೀರಿನ ಚೀಲಗಳು, ೫೪೦ ಮಿನರಲ್ ನೀರಿನ ಬಾಟಲ್‌ಗಳು, ೧೦೦೦ ಕೆ.ಜಿ. ಅಕ್ಕಿ, ೬೦೦ ಕೆ.ಜಿ. ಗೋಧಿ, ೧೪೦೦ ಕೆ.ಜಿ. ಹಿಟ್ಟು, ೧೦೫೦ ಕೆ.ಜಿ. ಕಾಳುಗಳು, ೭೬೫ ಕೆ.ಜಿ. ಎಣ್ಣೆ, ೧೧೦೦ ಕೆ.ಜಿ. ಕಿಚ್ಚಡಿ, ೧೬೫೦ ಕೆ.ಜಿ. ತರಕಾರಿಗಳು, ೧೫೦೦ ಕೆ.ಜಿ. ಆಲೂಗಡ್ಡೆ, ೧೫೦೦ ಕೆ.ಜಿ. ಈರುಳ್ಳಿ, ೬೦ ಕೆ.ಜಿ. ಉಪ್ಪು, ೧೦೦ ಕೆ.ಜಿ. ಹಾಲಿನಪುಡಿ, ೮೦೦ ಕೆ.ಜಿ. ಸಕ್ಕರೆ, ೧೬೦ ಕೆ.ಜಿ. ಟೀಪುಡಿ, ೨೮೦ ಚೀಲ ಕುಟುಂಬ ಪರಿಕರಗಳು, ೩೧೦೦ ಬಟ್ಟೆಯ ಪೀಸುಗಳು, ೧೧,೦೦೦ ಕಂಬಳಿಗಳು, ೧೨೯೦ ಅಂಗ ವಸ್ತ್ರಗಳು, ೨೫೦ ಹೊದಿಕೆಗಳು, ೧೮೪೫೦ ಪ್ಲಾಸ್ಟಿಕ್ ಶೀಟುಗಳು, ೧೦೦ ಟವೆಲುಗಳು, ೧೬೫೦ ಸ್ವೆಟರುಗಳು, ೧೭,೮೧೨ ಬೆಂಕಿ ಪೊಟ್ಟಣಗಳು, ೬೪,೦೨೫ ಮೇಣದ ಬತ್ತಿಗಳು, ೨೦೦ ರಕ್ತದ ಬಾಟಲುಗಳು—ಇವುಗಳನ್ನು ವಿತರಿಸಲಾಯಿತು. ಇಷ್ಟೇ ಅಲ್ಲದೆ ೧೧,೦೦೦ ಕೆ.ಜಿ. ಸೌದೆಯನ್ನು ಭೂಕಂಪಕ್ಕೆ ಆಹುತರಾದವರ ಶವಸಂಸ್ಕಾರಕ್ಕಾಗಿ ಒದಗಿಸಲಾಯಿತು. ಇದರೊಂದಿಗೆ ವೈದ್ಯಕೀಯ ಪರಿಹಾರವನ್ನೂ ಸಹ ಒದಗಿಸಲಾಗುತ್ತಿದೆ. ೩೧.೦೧.೨೦೦೧ರವರೆಗೆ ೧೦೦೦೦ ಜನರಿಗೆ ಚಿಕಿತ್ಸೆಯನ್ನು ನೀಡಲಾಗಿದೆ.

(ಆ) ಪೋರಬಂದರ್ ಶಾಖೆಯು ಭರವಾಡ, ಕೇಶವ್, ಮೊರಾಲ, ಗರಿಯಾಧರ್, ಜಂಬು, ಎರಾಡ, ದೆರೊದಾರ್ ಮಿತ್ರಾಲಾ, ಭಾಡ್, ಭಕ್ರಾಲ, ಹತಿಯಾನಿ ಮಂತಾದ ಕಡೆಗಳಲ್ಲಿನ ಭೂಕಂಪ ಸಂತ್ರಸ್ತ ೩೫೦ ಜನರಿಗೆ ಎರಡು ಹೊತ್ತು ಊಟ, ೧,೨೦೦ ಕೆ.ಜಿ. ಗಟಿಯಾ, ೧೨೦೦ ಕೆ.ಜಿ. ಗೋಧಿ, ೩೦೦ ಕೆ.ಜಿ. ಅಕ್ಕಿ, ೩೦೦ ಕೆ.ಜಿ. ಬೇಳೆ, ೧೨೦ ಪ್ಲಾಸ್ಟಿಕ್ ಟೆಂಟ್‌ಗಳು, ೧೭೪ ಕಂಬಳಿಗಳು, ೧೭೩ ಸ್ವೆಟರ್‌ಗಳು, ೧೩ ರಜಾಯಿಗಳು, ೬೭ ಬೆಡ್ ಶೀಟ್ ಮುಂತಾದುವುಗಳನ್ನು ಒದಗಿಸಿತು.

(ಇ) ಲಿಂಬಡಿ ಶಾಖೆಯ ಮೂಲಕ ಬೊರಾನಾ, ವಸ್ತಾರಿ, ಸಿಮ್ಲಾ ಮತ್ತು ಲಿಯಾತ್ ಪ್ರದೇಶಗಳಲ್ಲಿ ೪೦೦೦ ಜನ ಸಂತ್ರಸ್ತರಿಗೆ ಊಟದ ಪ್ಯಾಕೆಟ್ಟುಗಳನ್ನು ಒದಗಿಸಿತು.

ಅಹಮದಾಬಾದಿನ ರಾನಿಪ್ ಪ್ರದೇಶದಲ್ಲಿ ೭೦೦ ಸಂತ್ರಸ್ತರಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ. ಗಾಂಧೀಧಾಮ ನಗರದಲ್ಲಿ ವೈದ್ಯಕೀಯ ಶಿಬಿರವನ್ನು ಆರಂಭಿಸಲಾಗಿದೆ.

ಈ ಪರಿಹಾರ ಕಾರ್ಯವನ್ನು ಇತರೆ ಭೂಕಂಪ ಪೀಡಿತ ಪ್ರದೇಶಗಳಿಗೂ ವಿಸ್ತರಿಸಲಾಗುತ್ತಿದೆ. ಮುಂದಿನ ವರದಿಗಳನ್ನು ನಿರೀಕ್ಷಿಸಲಾಗುತ್ತಿದೆ.

**ಗಮನಿಸಿ !!**

**ಭೀಕರ ಭೂಕಂಪದಿಂದ ತತ್ತರಿಸಿರುವ ಗುಜರಾತಿನಲ್ಲಿ ೧೦೦ ಕುಟುಂಬಗಳ ಒಂದು ಗ್ರಾಮವನ್ನು ನಿಭಾಯಿಸಲು ಗುಜರಾತ್ ಸರ್ಕಾರಕ್ಕೆ ೪೫೦,೦೦೦ ಡಾಲರ್‌ಗಳು ಬೇಕಾಗುತ್ತದೆ!!!**

ಜಗತ್ತಿನಾದ್ಯಂತ ಜಾಲವಿರುವ ಸಿಟಿಲ್ ಫರ್ಮ್‌ನ ಕಾರ್ಮಿಕರು ೧೫೦,೦೦೦ ಡಾಲರ್‌ಗಳನ್ನು ಶೇಖರಿಸಿ ಭೂಕಂಪದಿಂದ ಸಂತ್ರಸ್ತರಿಗೆ ನೆರವು ನೀಡಿದ್ದಾರೆ.

ಮೈಕ್ರೋಸಾಫ್ಟ್‌ನವರು ಒಟ್ಟು ೪೦೦,೦೦೦ ಡಾಲರ್‌ಗಳ ನೆರವನ್ನು ಭೂಕಂಪ ಪೀಡಿತರಿಗಾಗಿ ಕೊಡುವ ಯೋಜನೆಯಿದೆ.

ಸಂಗ್ರಹ:— *ರಾದಾಕೃಷ್ಣ, ಅಮೆರಿಕ ಸಂಯುಕ್ತ ಸಂಸ್ಥಾನ*

ಗುಜರಾತ್ ಭೂಕಂಪ ಪರಿಹಾರ ಕಾರ್ಯಕ್ಕಾಗಿ ಕೊಡಲ್ಪಡುವ ಎಲ್ಲ ರೀತಿಯ ಕಾಣಿಕೆಗಳಿಗೆ—ನಗದು ಅಥವಾ 'ರಾಮಕೃಷ್ಣ ಮಿಷನ್' ಹೆಸರಿನಲ್ಲಿ ಚೆಕ್ ಅಥವಾ ಡ್ರಾಫ್ಟ್ ಮೂಲಕ ವಾಗಿರಬಹುದು—ಸರ್ಕಾರದ ಆದೇಶದ ಪ್ರಕಾರ ಶೇ.೧೦೦ರಷ್ಟು ತೆರಿಗೆ ವಿನಾಯಿತಿ ಇರುತ್ತದೆ. ರಾಮಕೃಷ್ಣ ಮಹಾಸಂಘದ ಎಲ್ಲ ಕೇಂದ್ರಗಳಲ್ಲಿ ಕಾಣಿಕೆಯನ್ನು ನೀಡಬಹುದು.

---

## ವಿವೇಕಾನಂದ ಆಶ್ರಮ, ಅಲಸೂರು, ಬೆಂಗಳೂರು ಆಶ್ರಮದ ಡಿಸೆಂಬರ್ ಮತ್ತು ಜನವರಿ ೨೦೦೧ರ ಚಟುವಟಿಕೆಗಳ ಸಂಕ್ಷಿಪ್ತ ವರದಿ

೨೦೦೦ ದ ಡಿಸೆಂಬರ್ ೧೭, ಶ್ರೀ ಶಾರದಾದೇವಿಯವರ ಜನ್ಮದಿನದಂದು ಆಶ್ರಮವು ನಡೆಸಿದ ಅನೇಕ ಸಾಂಸ್ಕೃತಿಕ ಸ್ಪರ್ಧೆಗಳ ಬಹುಮಾನವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ಕಾರದಲ್ಲಿ ಮಂತ್ರಿಗಳಾಗಿರುವ ಶ್ರೀಮತಿ ಸುಮಾ ವಸಂತ ಉಪಸ್ಥಿತರಿದ್ದು ಮಕ್ಕಳಿಗೆ ಬಹುಮಾನ ವಿತರಣೆಗೈದರು.

ಡಿಸೆಂಬರ್ ೧೮ರಂದು ಶ್ರೀಮಾತೆಯವರ ಜನ್ಮದಿನೋತ್ಸವದ ಅಂಗವಾಗಿ ಆಶ್ರಮದ ಸುತ್ತ ಮುತ್ತಲಿನ ಬಡಜನರಿಗೆ ಸೀರೆ ಮತ್ತು

ಪಂಚೆ ವಿತರಿಸಲಾಯಿತು. ಅದರಲ್ಲಿ ೩೦೦ ಜನ ಮಹಿಳೆಯರು ೩೦೦ ಜನ ಪುರುಷರು ಭಾಗವಹಿಸಿದರು. ಜೊತೆಗೆ ಬಿಸ್ಕತ್ತು, ಬಾಳೆ ಹಣ್ಣು ಹಾಗೂ ಸಿಹಿಯನ್ನೂ ಹಂಚಲಾಯಿತು. ಈ ಕಾರ್ಯಕ್ರಮದಲ್ಲಿ ಇನ್‌ಫೋಸಿಸ್‌ನ ಶ್ರೀಮತಿ ಸುಧಾಮೂರ್ತಿ ಉಪಸ್ಥಿತರಿದ್ದರು. ಹಾಗೂ ಇತರ ಅನೇಕ ಗಣ್ಯರು ಭಾಗವಹಿಸಿ ದ್ದರು.೩೦೦ ಬಡಜನರಿಗೆ ಆಶ್ರಮದ ವತಿಯಿಂದ ಉಣ್ಣೆರಗ್ಗುಗಳನ್ನು ಕೊಡಲಾಯಿತು. ಜೊತೆಗೆ ಬಿಸ್ಕತ್ತು, ಬಾಳೆಹಣ್ಣು ಮತ್ತು ಕಾಫಿಯನ್ನು ಹಂಚಲಾಯಿತು.

ಪ್ರತಿತಿಂಗಳು ನಡೆಸಲಾಗುತ್ತಿರುವ ಉಚಿತ ಕಣ್ಣಿನ ಪರೆರೋಗ ತಪಾಸಣೆ ಶಿಬಿರವನ್ನು ೧೬.೧೨.೨೦೦೦ದಂದು ನಡೆಸಲಾಯಿತು. ಅದರಲ್ಲಿ ೯೬ ಜನರಿಗೆ ತಪಾಸಣೆಗೈದು ೩೧ ಜನರಿಗೆ ಕಣ್ಣಿನ ಚಿಕಿತ್ಸೆ ಮಾಡಲಾಯಿತು.

ಸುಮಾರು ೧೦೦ ಜನ ಯುವಕರಿಗೆ ಯುವಮೇಳ ನಡೆಸಲಾಯಿತು. ಅದರಲ್ಲಿ ಯುವಕರಿಗೆ ಭಜನೆ, ಉಪನ್ಯಾಸ, ಪ್ರಶ್ನೋತ್ತರಗಳ ಮೂಲಕ ಅನೇಕ ತರಹದ ಜೀವನ ಮೌಲ್ಯಗಳನ್ನು ತಿಳಿಸಿಕೊಡಲಾಯಿತು.

೨೦೦೧ ಜನವರಿ ೧೨ರಂದು ರಾಷ್ಟ್ರೀಯ ಯುವದಿನವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಅಂದು ಅಲಸೂರಿನ ಕೆರೆಯ ದಂಡೆಯಲ್ಲಿರುವ ಉದ್ಯಾನವನಕ್ಕೆ ಸ್ವಾಮಿ ವಿವೇಕಾನಂದ ಉದ್ಯಾನವನ ಎಂದು ಮರು ಹೆಸರಿಡಲಾಯಿತು. ಈ ಕಾರ್ಯಕ್ರಮದಲ್ಲಿ ಬೆಂಗಳೂರು ಮಹಾನಗರಪಾಲಿಕೆಯ ಮಹಾಪೌರರಾದ ಶ್ರೀಮತಿ ಪ್ರೇಮ ಕಾರಿಯಪ್ಪ ಹಾಗೂ ಇನ್ನೂ ಅನೇಕ ಸರ್ಕಾರಿ ಗಣ್ಯರು ಉಪಸ್ಥಿತರಿದ್ದರು. ಎರಡು ಶಾಲೆಯ ಮಕ್ಕಳು ಬಂದು ಬ್ಯಾಂಡ್ ಬಾರಿಸಿ ಈ ಕಾರ್ಯಕ್ರಮಕ್ಕೆ ವಿಶೇಷ ಮೆರಗು ನೀಡಿದರು. ❑

### ಅಲಹಾಬಾದ್ ಕುಂಭಮೇಳ

ಅಲಹಾಬಾದಿನಲ್ಲಿ ಈ ಬಾರಿ ಹೊಸ ಸಹಸ್ರಮಾನದ ಮೊದಲ ಕುಂಭಮೇಳ ನಡೆಯಿತು. ಜಗತ್ತಿನಲ್ಲಿಯೇ ಅತ್ಯಂತ ಪ್ರಸಿದ್ಧ ಮತ್ತು ಬೃಹತ್ ಧಾರ್ಮಿಕ ಉತ್ಸವವಾದ ಇದರಲ್ಲಿ ರಾಮಕೃಷ್ಣ ಮಹಾಸಂಘವು ಒಂದು ಶಿಬಿರವನ್ನು ಆಯೋಜಿಸಿತ್ತು. ಇದು ಜನವರಿ ಲರಂದು ಉದ್ಘಾಟಿಸಲ್ಪಟ್ಟು ಜನವರಿ ೩೧ರವರೆಗೆ ೩೭೮ ಸಂನ್ಯಾಸಿಗಳೂ ಸೇರಿದಂತೆ ೨,೧೩೩ ಯಾತ್ರಿಕರಿಗೆ ಊಟ ವಸತಿಗಳನ್ನು ಒದಗಿಸಿತು.

ಈ ಸಂದರ್ಭದಲ್ಲಿ ಸಂಘವು ಅನೇಕ ಆಧ್ಯಾತ್ಮಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಿತ್ತು. ಇವುಗಳಲ್ಲಿ ಮುಖ್ಯವಾದುವು :ಆಧ್ಯಾತ್ಮಿಕ ಶಿಬಿರ, ಯುವಸಮ್ಮೇಳನ, ಭಕ್ತ ಸಮ್ಮೇಳನ, ಸಾಧು ಸಮ್ಮೇಳನ ಮತ್ತು ವೇದಾಂತ ಸಭೆ. **'ಹೊಸ ಸಹಸ್ರಮಾನದಲ್ಲಿ ಸ್ವಾಮಿ ವಿವೇಕಾನಂದರ ಪ್ರಸ್ತುತತೆ'** ಎಂಬ ವಿಷಯದ ಮೇಲೆ ನಡೆದ ವಿಚಾರ ಸಂಕಿರಣದಲ್ಲಿ ಅಲಹಾಬಾದಿನ ಮುಖ್ಯ ನ್ಯಾಯಾಧೀಶರಾದ ಶ್ರೀ ಶ್ಯಾಮಲಸೇನ್‌ರವರು ಅಧ್ಯಕ್ಷತೆ ವಹಿಸಿದ್ದರು. ಪುಸ್ತಕ ಮಾರಾಟ ವಿಭಾಗ ಮತ್ತು ವಸ್ತುಪ್ರದರ್ಶನಗಳನ್ನು ಆಯೋಜಿಸಲಾಗಿತ್ತು. ವೈದ್ಯಕೀಯ ಶಿಬಿರದಲ್ಲಿ ೩೦,೩೫೧ ರೋಗಿಗಳಿಗೆ ಔಷಧೋಪಚಾರ ಮಾಡಲಾಯಿತು. ಇವರಲ್ಲಿ ಒಳ ರೋಗಿಗಳ ಚಿಕಿತ್ಸೆ ಪಡೆದವರು ೧೫೩. ಈ ಸಂದರ್ಭದಲ್ಲಿ ಒಂದು ಸ್ಮರಣಸಂಚಿಕೆಯನ್ನೂ ಬಿಡುಗಡೆ ಮಾಡಲಾಯಿತು. ❑

## ರಾಮಕೃಷ್ಣ-ವಿವೇಕಾನಂದ ಸಾಧು-ಭಕ್ತ ಸಮಾಗಮ

**ಕರ್ನಾಟಕ**ದಲ್ಲಿನ ರಾಮಕೃಷ್ಣ ವಿವೇಕಾನಂದರ ಭಕ್ತವೃಂದಕ್ಕಾಗಿ ೪ದಿನಗಳ ಈ ಅಪೂರ್ವ ಕಾರ್ಯಕ್ರಮ ತುಮಕೂರಿನಲ್ಲಿ ಖಾಸಗಿ ಸಂಸ್ಥೆಯಾದ ರಾಮಕೃಷ್ಣ ವಿವೇಕಾನಂದ ಆಶ್ರಮದ ವತಿಯಿಂದ ನಡೆಯಿತು. ಸಿದ್ಧಗಂಗೆಯ ಖ್ಯಾತ ಶ್ರೀಗಳಾದ ಪರಮಪೂಜನೀಯ ಡಾ. ಶಿವಕುಮಾರಸ್ವಾಮಿಗಳು ಈ ಸಂದರ್ಭದಲ್ಲಿ 'ಅನನ್ಯ' ಎಂಬ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡುತ್ತ, 'ಸರ್ವರ ಕಲ್ಯಾಣವನ್ನೇ ಧ್ಯೇಯವಾಗಿಟ್ಟುಕೊಂಡಿರುವ ದಾರ್ಶನಿಕರಾದ ಬಸವಣ್ಣ, ವಿವೇಕಾನಂದರ ಚಿಂತನೆಗಳಲ್ಲಿ ಮಾತ್ರವೇ ಇಂದಿನ ಪ್ರಕ್ಷುಬ್ಧ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯ' ಎಂದು ವಿವರಿಸಿದರು. ಅಧ್ಯಕ್ಷಪೀಠದಿಂದ ಮಾತನಾಡಿದ ಪೊನ್ನಂಪೇಟೆಯ ಶ್ರೀರಾಮಕೃಷ್ಣ ಶಾರದಾಶ್ರಮದ ಅಧ್ಯಕ್ಷರಾದ ಸ್ವಾಮಿ ಜಗದಾತ್ಮಾನಂದಜೀಯವರು,'ನಾವಿಂದು ಋಷಿಮುನಿಗಳ ಜೀವನ ಮಾರ್ಗದಿಂದ ಉತ್ತಮ ಜ್ಞಾನವನ್ನು ಅರಿಯಬೇಕಾಗಿದೆ. ಧರ್ಮದ ಮರ್ಮವನ್ನರಿಯದೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಅಸಾಧ್ಯ'ಎಂದರು. **'ಸಾಧು-ಭಕ್ತ ಸಮಾಗಮದ ಕಾರ್ಯಕ್ರಮ'**ವನ್ನು ಉದ್ಘಾಟಿಸಿದ ಕೇಂದ್ರ ವರಮಾನ ಇಲಾಖೆಯ ಕರ್ನಾಟಕ ವಿಭಾಗದ ಆಯುಕ್ತರಾದ ಶ್ರೀ ಎಚ್. ಎಸ್. ಸುಬ್ರಹ್ಮಣ್ಯರವರು ಮಾತನಾಡಿ 'ರಾಮಕೃಷ್ಣ-ವಿವೇಕಾನಂದರ ಜೀವನ ಸಂದೇಶಗಳಲ್ಲಿರುವಂತೆ ಆಧ್ಯಾತ್ಮಿಕತೆಗೆ ಆದ್ಯತೆ ನೀಡಿದಾಗ ಮಾತ್ರವೇ ನಮ್ಮ ವೈಯಕ್ತಿಕ ಹಾಗೂ ಸಾಮಾಜಿಕ ಬದುಕಿನಲ್ಲಿ ನೆಮ್ಮದಿಯನ್ನು ಕಾಣಲು ಸಾಧ್ಯ' ಎಂದು ನುಡಿದರು.

೪ ದಿನಗಳ ಈ ಸಮಾಗಮದ ಕಾರ್ಯಕ್ರಮಗಳಲ್ಲಿ ಒಟ್ಟು ಏಳು ಅಧಿವೇಶನಗಳಿದ್ದವು.

ಈ ಅಧಿವೇಶನಗಳು ಕೆಳಗಿನಂತಿವೆ ರಾಮಕೃಷ್ಣರ ಜೀವನ ದರ್ಶನ, ದಿವ್ಯತ್ರಯರ ಜೀವನ—ಕನ್ನಡ ಸಾಹಿತ್ಯದ ನಮನ,ಕನ್ನಡದ ನೆಲದಲ್ಲಿ ದಿವ್ಯತ್ರಯರ ಚಿಂತನೆಯ ಪ್ರಭಾವ, ಶಾರದಾ ಮಾತೆ—ಸಾಧನೆಯ ಅಭಿಜಾತೆ, ಲೌಕಿಕ ಜೀವನದಲ್ಲಿ ಆಧ್ಯಾತ್ಮಿಕತೆಯ ಔಚಿತ್ಯ, ಸಾಮಾಜಿಕ ಸೇವೆಯಿಂದ ಆಧ್ಯಾತ್ಮಿಕ ಪ್ರಗತಿ ಮತ್ತು ವಿವೇಕಾನಂದರ ತತ್ತ್ವ—ಭಾರತದ ಸತ್ತ್ವ. ಈ ಅಧಿವೇಶನಗಳಲ್ಲಿ ಪೂಜ್ಯರಾದ ಸ್ವಾಮಿ ಗೌತಮಾನಂದರು, ಸ್ವಾಮಿ ಪುರುಷೋತ್ತಮಾನಂದರು, ಸ್ವಾಮಿ ಜಗದಾತ್ಮಾನಂದರು, ಸ್ವಾಮಿ ವೀತಭಯಾನಂದರು, ಸ್ವಾಮಿ ರಾಘವೇಶಾನಂದರು, ಸ್ವಾಮಿ ಪ್ರಮಥೇಶಾನಂದರು,ಸ್ವಾಮಿ ಆತ್ಮವಿದಾನಂದರು, ಸ್ವಾಮಿ ನಿತ್ಯಸ್ಥಾನಂದರು, ಸ್ವಾಮಿ ಯುಕ್ತಾತ್ಮಾನಂದರು, ಪರಮಾನಂದ ಭಾರತಿ ಸ್ವಾಮಿಗಳು, ಬೇಲಿ ಮಠದ ಶ್ರೀ ಶಿವರುದ್ರ ಮಹಾಸ್ವಾಮಿಗಳು, ಶ್ರೀರಂಗಪ್ರಿಯ



ಸಾಧು ಭಕ್ತಸಮಾಗಮದಲ್ಲಿ ಚೆನ್ನೈನ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್‌ರವರು ಆಶೀರ್ವಚನ ನೀಡುತ್ತಿರುವುದು

ಸ್ವಾಮೀಜಿಯವರು, ಶ್ರೀ ಶಿವಾನಂದ ಶಿವಾಚಾರ್ಯ ಮಹಾಸ್ವಾಮಿಗಳು, ಸ್ವಾಮಿ ವೀರೇಶಾನಂದ ಸರಸ್ವತಿಯವರು, ಸ್ವಾಮಿ ನಿರ್ಭಯಾನಂದ ಸರಸ್ವತಿಯವರು, ಶ್ರೀಯುತರಾದ ಡಾ. ಪ್ರಭುಶಂಕರ, ಹೆಚ್.ಎಸ್. ಮರಳೀಧರ, ಡಾ.ಗುರುರಾಜ ಕರ್ಜಗಿ, ಶ್ರೀಮತಿ ವಿಜಯಭಾರತಿ — ಇವರುಗಳು ಮಾತನಾಡಿದರು.

ಈ ಭಕ್ತಸಮಾಗಮದಲ್ಲಿ ಕೆಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಗಳನ್ನು ನಡೆಸಿಕೊಟ್ಟ ಕಲಾವಿದರು : ಬೆಂಗಳೂರಿನ ವಿದ್ವಾನ್ ಶ್ರೀ ಕೆ. ಗುರುರಾಜ್, ಧಾರವಾಡದ ಆಕಾಶವಾಣಿ ಕಲಾವಿದೆ ಕುಮಾರಿ ಶಕ್ತಿ ಪಾಟೀಲ್, ಭದ್ರಾವತಿ ಆಕಾಶವಾಣಿ ಕಲಾವಿದೆ ಕುಮಾರಿ ರಂಜನಿ, ಬೆಂಗಳೂರಿನ ಶ್ರೀಶಾರದಾದೇವಿ ಅಧ್ಯಾತ್ಮಮಂದಿರದ ಮಾತೃವೃಂದದವರು ಹಾಗೂ ಖ್ಯಾತ ಹರಿಕಥೆ ದಾಸರಾದ ಭದ್ರಗಿರಿ ಅಚ್ಯುತ ದಾಸರು.

**ಸಮಾರೋಪ ಸಮಾರಂಭ** : ಡಿಸೆಂಬರ್ ೩೧ರಂದು ಈ ಸಾಧು-ಭಕ್ತ ಸಮಾಗಮದ ಸಮಾರೋಪ ಸಮಾರಂಭದಲ್ಲಿ ಪ್ರಮುಖವಾಗಿ ಮಾತನಾಡಿದ ಪರಮಪೂಜ್ಯ ಸ್ವಾಮಿ ಗೌತಮಾನಂದಜಿಯವರು, 'ಶ್ರೀರಾಮಕೃಷ್ಣರ ಮತ್ತು ಸ್ವಾಮಿ ವಿವೇಕಾನಂದರ ನುಡಿಗಳಲ್ಲಿ ನಾವು ಕಾಣುವುದು ಒಂದು ಸಮನ್ವಯ— ಪ್ರಾಚೀನ ಮತ್ತು ಅರ್ವಾಚೀನಗಳೆರಡರ ಸಮನ್ವಯ. ಈ ಅದ್ಭುತ ಸಮನ್ವಯದಿಂದ ಉದ್ಭವವಾದ ಒಂದು ಹೊಸ ಯುಗಧರ್ಮ ಮನುಕುಲದ ಶ್ರೇಯೋಭಿವೃದ್ಧಿಗಾಗಿ ಅನಂತ ಸಾಧ್ಯತೆಗಳ ಮುಕ್ತವಾದ ದ್ವಾರವನ್ನು ತೆರೆದಿದೆ.' ಎಂದರು. ಪರಮಪೂಜ್ಯ ಸ್ವಾಮಿ ಪುರುಷೋತ್ತಮಾನಂದಜಿಯವರು ತಮ್ಮ ಆಶೀರ್ವಚನದಲ್ಲಿ, 'ವಿವೇಕಾನಂದರ ನಿರೀಕ್ಷೆಗಳನ್ನು ಸಾಕಾರಗೊಳಿಸುವ ಗುರುತರ ಜವಾಬ್ದಾರಿ ನಮ್ಮ ಯುವ ಜನಾಂಗದ ಮೇಲಿದೆ' ಎಂದು ಅಭಿಪ್ರಾಯಪಟ್ಟರು.

ಖ್ಯಾತ ಉಪನ್ಯಾಸಕರಾದ ಪರಮಪೂಜ್ಯ ಸ್ವಾಮಿ ಜಗದಾತ್ಮಾನಂದಜೀಯವರು ಮಾತನಾಡುತ್ತಾ 'ಧರ್ಮದ ಮಹತ್ವವನ್ನು ಬೋಧಿಸಿ ಅದರ ಆದರ್ಶಗಳನ್ನು ಮುಂದಿನ ಪೀಳಿಗೆ ಮೈಗೂಡಿಸಿಕೊಳ್ಳುವ ನಿಟ್ಟಿನಲ್ಲಿ ನಾವಿಂದು ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ' ಎಂದರು.

ಇಂತಹ ಬೃಹತ್ ಸಾಧು-ಸಮಾಗಮವನ್ನು ಅಚ್ಚುಕಟ್ಟಾಗಿ, ದಕ್ಷವಾದ ರೀತಿಯಲ್ಲಿ ಆಯೋಜಿಸಿದ್ದ ತುಮಕೂರಿನ ರಾಮಕೃಷ್ಣ-ವಿವೇಕಾನಂದ ಆಶ್ರಮದ ಸ್ವಾಮಿ ವೀರೇಶಾನಂದ ಸರಸ್ವತಿಯವರು ಪ್ರಾಸ್ತಾವಿಕ ಭಾಷಣ ಮಾಡಿದರು. ನೆರೆದಿದ್ದ ಭಕ್ತ ಪ್ರತಿನಿಧಿಗಳಿಗೆ ಹಾಗೂ ಇತರರಿಗೆ ತಮ್ಮ ಆಧ್ಯಾತ್ಮಿಕ ಜೀವನಕ್ಕೆ ಹೊಸ ಸ್ಫೂರ್ತಿ, ಚೇತನಗಳನ್ನು ಈ ನಾಲ್ಕು ದಿನಗಳ ಸಮಾಗಮ ಕೊಟ್ಟಿತು. ❑

## ಆಶ್ರಮದ ವಿಶೇಷ ಕಾರ್ಯಕ್ರಮಗಳು

### ಮಾರ್ಚ್ 2001

| | | |
|---|---|---|
| **09** | **ಶುಕ್ರವಾರ** | **ಶ್ರೀಚೈತನ್ಯ ಜಯಂತಿ** |
| **13** | **ಮಂಗಳವಾರ** | **ಸ್ವಾಮಿ ಯೋಗಾನಂದ ಜಯಂತಿ** |

ಪ್ರತಿ ಶನಿವಾರ ಇಂಗ್ಲೀಷಿನಲ್ಲಿ ಮತ್ತು ಭಾನುವಾರ ಕನ್ನಡದಲ್ಲಿ ಸಂಜೆ 6.00 ರಿಂದ 7.00 ರವರೆಗೆ ಆಧ್ಯಾತ್ಮಿಕ ಪ್ರವಚನಗಳು ನಡೆಯುತ್ತವೆ.

ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ

## ಅಮೃತ ಮಹೋತ್ಸವದ ಸಮಾರೋಪ ಸಮಾರಂಭ

ರಾಮಕೃಷ್ಣಮಠ ಮತ್ತು ಮಿಷನ್ನಿನ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜೀಯವರು ಮೈಸೂರು ರಾಮಕೃಷ್ಣ ಆಶ್ರಮದ ಕಂಪ್ಯೂಟರೀಕರಿಸಿದ ಪುಸ್ತಕಾಲಯವನ್ನು ಫೆಬ್ರವರಿ 16, ಶುಕ್ರವಾರದಂದು ಸಂಜೆ 5.00ಕ್ಕೆ ಉದ್ಘಾಟಿಸಿದರು.

ಕಳೆದ ವರ್ಷಾದ್ಯಂತ ಮೈಸೂರು ಆಶ್ರಮದಲ್ಲಿ ತನ್ನ ಅಮೃತ ಮಹೋತ್ಸವದ ಅಂಗವಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಅಮೃತ ಮಹೋತ್ಸವದ ಸಮಾರೋಪ ಸಮಾರಂಭವು ಇದೇ ಫೆಬ್ರವರಿ 16, ಶುಕ್ರವಾರದಂದು ಸಂಜೆ 5.30ಕ್ಕೆ ಆಶ್ರಮದ ಸಭಾಂಗಣದಲ್ಲಿ, ಪೂಜ್ಯ ಸ್ವಾಮಿ ಆತ್ಮಸ್ಥಾನಂದಜೀಯವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಶ್ರೀಗಂಧಕ್ಕೆ ಹೆಸರಾದ ಈ ನಾಡು ತನ್ನ ಆಧ್ಯಾತ್ಮಿಕ ಪರಿಮಳವನ್ನು ಇನ್ನೂ ಹೆಚ್ಚು ಹೆಚ್ಚು ಪಸರಿಸುವಂತಾಗಲಿ ಎಂದು ಹಾರೈಸಿದರು. ಅಧ್ಯಕ್ಷತೆ ವಹಿಸಿದ್ದ ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಗೌತಮಾನಂದಜೀಯವರು ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು ಗ್ರಂಥದ ಮೂರನೆಯ ಸಂಪುಟವನ್ನು ಬಿಡುಗಡೆ ಮಾಡಿ ಶ್ರೀರಾಮಕೃಷ್ಣರ ದೃಷ್ಟಿಯಲ್ಲಿ ಶಾಶ್ವತ ಮೌಲ್ಯಗಳಾವುವು ಎಂಬುದನ್ನು ತಿಳಿಸಿಕೊಟ್ಟರು.